KPC ಯಿಂದ ವರಾಹಿ, ಚಕ್ರ ಸಾವೆಹಕ್ಕಲು ಮುಳುಗಡೆ

863 (102) ಶ್ರೀ ಕಿಮ್ಮನೆ ರತ್ನಾಖರ್ (ತೀರ್ಥಹಳ್ಳಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಪಿ.ಸಿ. ಯವರು ನಿರ್ಮಿಸಿದ ವರಾಹಿ, ಚಕ್ರಾ, ಸಾವೆಹಕ್ಲು ಡ್ಯಾಂಗಳಿಂದ ಮುಳುಗಡೆಯಾದ ರೈತರಿಗೆ ಈವರೆವಿಗೂ ಮುಳುಗಡೆ ರೈತರ ಪರಿಹಾರ, ಪುನರ್ ವಸತಿ ಮತ್ತು ಉದ್ಯೋಗ ಇಲ್ಲದೆ ಕಛೇರಿಗಳಿಗೆ ಅಲೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಚಕ್ರ, ಸಾವೆಹಕ್ಲು, ವರಾಹಿ ಮುಳುಗಡೆ ನೀರಿನಿಂದ ಮುಳುಗಡೆ 'ಆಗದೆ' ಪೂರ್ಣನಾಗರಿಕ ಸೌಲಭ್ಯಗಳಿಂದ ವಂಚಿತರಾಗಿ, ಮೂಲಭೂತ ಸೌಲಭ್ಯಗಳಿಲ್ಲದೆ ರಸ್ತೆ, ಸೇತುವೆ, ವಿದ್ಯುಚ್ಛಕ್ತಿ ಯಾವುದೂ ಇಲ್ಲದೆ ಮೂಲಭೂತ ಸೌಕರ್ಯಕ್ಕಾಗಿ ಕಛೇರಿಗಳಿಗೆ ಅಲೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಕೈ ಗೊಂಡಿರುವ ಕ್ರಮಗಳೇನು?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ವರಹಿ ಚಕ್ರಾ-ಸಾವೆಹಕ್ಲು ಯೋಜನೆಯ ಅಣೆಕಟ್ಟುಗಳ ನಿರ್ಮಾಣದಿಂದ ಹೊಸನಗರ ತಾಲ್ಲೂಕು ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಕೆಲವು ಪ್ರದೇಶಗಳನ್ನು ಬಾಧಿತವಾಗಿರುತ್ತವೆ.

ಸದರಿ ಯೋಜನೆಗಳಿಂದ ಒಟ್ಟು 1736 ಕುಟುಂಬಗಳು ಬಾಧಿತರಾಗಿರುತ್ತವೆ. ಇದರಲ್ಲಿ 314 ಜನರಿಗೆ ಕರ್ನಾಟಕ ವಿದ್ಯುತ್ ನಿಗಮದಲ್ಲಿ ಖಾಯಂ ಉದ್ಯೋಗ ಕಲ್ಪಿಸಲಾಗಿದೆ. ಇದು ಶೇಕಡ. 17.69 ಆಗಿರುತ್ತದೆ ಮತ್ತು 54 ಜನರಿಗೆ ಡಿಪ್ಲೋಮ ಶಿಕ್ಷಣ ಮತ್ತು 86 ಜನರಿಗೆ ಐ.ಟಿ.ಐ ಶಿಕ್ಷಣ ಕರ್ನಾಟಕ ವಿದ್ಯುತ್ ನಿಗದ ವತಿಯಿಂದ ನೀಡಲಾಗಿರುತ್ತದೆ. ವಿವರಗಳನ್ನು ಅನುಬಂಧ-ಅ ರಲ್ಲಿ ನೀಡಲಾಗಿದೆ.

ಚಕ್ರಾ-ಸಾವೆಹಕ್ಲು ಯೋಜನೆಯಿಂದ ಹೊಸನಗರ ತಾಲ್ಲೂಕಿನ ಕೆಲವು ಪ್ರದೇಶಗಳು ಬಾಧಿತವಾಗಿರುತ್ತವೆ. ಯೋಜನೆಯಿಂದ ನಿರ್ವಸಿತರಾದ ಎಲ್ಲಾ ಸಂತ್ರಸ್ತ ಕುಟುಂಬಗಳಿಗೆ ಸಂಪೂರ್ಣ ಪರಿಹಾರ ನೀಡಲಾಗಿದ್ದು, ಪುನರ್ ವಸತಿ ಅನುದಾನದ ಪಾವತಿಯ ಪ್ರಕ್ರಿಯೆಯು ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಯಲ್ಲಿ ಪ್ರಗತಿಯಲ್ಲಿದೆ. ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿಯಲ್ಲಿ ಅವಾರ್ಡ ಆಧರಿಸಿ ಸಿದ್ಧಪಡಿಸಿರುವ, ಚಕ್ರ-ಸಾವೆಹಕ್ಲು

ತಿರುವು ಯೋಜನೆಯ ಸಂತ್ರಸ್ಥ ಕುಟುಂಬಗಳ ಪಟ್ಟಿಯಂತೆ ಒಟ್ಟು 261 ಕುಟುಂಬಗಳು ಇರುತ್ತವೆ. ಇದರಲ್ಲಿ ಹಾಯ್‌ಹೊಳೆ ಪುನರ್ವಸತಿ ಕೇಂದ್ರದಲ್ಲಿ ಜಮೀನು ಪಡೆದುಕೊಳ್ಳಲು 89 ಕುಟುಂಬಗಳಿಗೆ ಸಾಗುವಳಿ ಚೀಟಿಗಳನ್ನು ಹಂಚಲಾಗಿರುವುದನ್ನು ಕಳೆದು, ನಿವ್ವಳ 172 ಕುಟುಂಬಗಳೂ ಪುನರ್ವಸತಿ ಅನುದಾನ ಪರಿಹಾರ ಪಾವತಿಗಳಿಗೆ ಅರ್ಹ ಕುಟುಂಬಗಳೆಂದು ಪರಿಗಣಿಸಲಾಗಿದೆ. ಇಂದಿನವರೆಗೆ ಒಟ್ಟು 93 ಕುಟುಂಬಗಳಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಪ್ರತಿ ಕುಟುಂಬ ಕಳೆದುಕೊಂಡಿರುವ ಜಮೀನಿನ ಆಧಾರದ ಮೇಲೆ ಪುನರ್ವಸತಿ ಅನುದಾನ ಮೊತ್ತವನ್ನು ಪಾವತಿಸಿರುತ್ತಾರೆ. ಉಳಿದ 79 ಕುಟುಂಬಗಳ ಜಮೀನಿನ ದಾಖಲೆಗಳು ವಿಶೇಷ ಭೂಸ್ವಾಧೀನಾಧಿಕಾರಿಗಳ ಕಚೇರಿಯಲ್ಲಿ ಪರಿಶೀಲನೆಯ ಹಂತದಲ್ಲಿರುತ್ತವೆ.

ಅನೇಕ ಕುಟುಂಬಗಳು ಸೂಕ್ತ ದಾಖಲೆಗಳನ್ನು ಸಲ್ಲಿಸದೇ ಇರುವ ಕಾರಣ ಪುನರ್ವಸತಿ ಅನುದಾನ ಪಡೆಯದಿರುವ ಸಂತ್ರಸ್ಥರಿಗಾಗಿ ದಿನಾಂಕ: 18.10.2011ರಲ್ಲಿ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ, ಪ್ರಕಟಣೆ ಹೊಡರಿಸಿರುವ 15 ದಿನಗಳೊಳಗೆ ಹೊಸನಗರ ತಹಶೀಲ್ದಾರ್ ರವರನ್ನು ಸಂಪರ್ಕಿಸಿ ಅಗತ್ಯ ದಾಖಲೆ ಮತ್ತು ಮಾಹಿತಿ ನೀಡಿದಲ್ಲಿ ಪುನರ್ವಸತಿ ಅನುದಾನ ನೀಡಲು ಕ್ರಮ ಕೈಗೊಳ್ಳುವುದಾಗಿ ಚಕ್ರಾ, ಸಾವೆಹಕ್ಲು ಮತ್ತು ವರಾಹಿ ಯೋಜನೆಯ ವಿಶೇಷ ಭೂಸ್ವಾಧೀನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ವರಾಹಿ, ಚಕ್ರಾ–ಸಾವೆಹಕ್ಲು ಯೋಜನೆಯಡಿ ಮುಳುಗಡೆಯಾಗಿರುವ ಎಲ್ಲಾ ಖಾಸಗಿ ಜಮೀನು ಮತ್ತು ಕಟ್ಟಡಗಳನ್ನು ಕರ್ನಾಟಕ ವಿದ್ಯುತ್ ನಿಗಮಕ್ಕೆ ಸ್ವಾಧೀನಪಡಿಸಿಕೊಂಡು ಪರಿಹಾರ ಪಾವತಿಸಲಾಗಿದೆ. ಕರ್ನಾಟಕ ವಿದ್ಯುತ್ ನಿಮಗದ ಪರಿಹಾರದಿಂದ ಸಮಾಧಾನವಾಗದೆ ಇರುವ ಕೆಲವು ಸಂತ್ರಸ್ತರು ವಿವಿಧ ನ್ಯಾಯಾಲಯಗಳಲ್ಲಿ ಹೆಚ್ಚುವರಿ ಪರಿಹಾರ ಕೋರಿ ಮೊಕದ್ದಮೆಗಳನ್ನು ದಾಖಲಿಸಿದ್ದು, ನ್ಯಾಯಾಲಯದ ಇತ್ಯರ್ಥಕ್ಕನುಗುಣವಾಗಿ ಪರಿಹಾರವನ್ನು ನ್ಯಾಯಾಲಯಗಳ ಮೂಲಕವೇ ನೀಡಲಾಗುತ್ತಿದೆ.

ಹೊಸನಗರ ಮತು ತೀರ್ಥಹಳ್ಳಿ ತಾಲ್ಲೂಕಿನ ಮುಳುಗಡೆ ವ್ಯಾಪ್ತಿಯಲ್ಲಿ ಬಂದಿರುವ ಎಲ್ಲಾ ಗ್ರಾಮಗಳಿಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಸದರಿ ಯೋಜನೆಗಳಿಂದ ವಿದ್ಯುತ್ ಸಂಪರ್ಕ ಕಳೆದುಕೊಂಡ ಮಜಿರೆಗಳಿಗೆ ಮೆಸ್ಕಾಂ ಮೂಲಕ ಮರು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ವರಾಹಿ, ಚಕ್ರಾ–ಸಾವೆಹಕ್ಲು ಯೋಜನೆಯಡಿ ಮುಳುಗಡೆಯಾಗದೆ ರಸ್ತೆಯ ಸಂಪರ್ಕ ಕಳೆದುಕೊಂಡ ಎಲ್ಲಾ ಹಳ್ಳಿಗಳಿಗೆ ಪರ್ಯಾಯ ರಸ್ತೆ ವ್ಯವಸ್ಥೆಯನ್ನು ನಿರ್ಮಿಸಿ ಸಂಬಂಧಿಸಿದ ಇಲಾಖೆಗಳಿಗೆ ಹಸ್ತಾಂತರಿಸಲಾಗಿದೆ. ಇದರ ವಿವರಗಳನ್ನು ಲಗತ್ತಿಸಿದೆ. (ಅನುಬಂಧ – ಆ).

ಕರ್ನಾಟಕ ವಿದ್ಯುತ್ ನಿಗಮವು ದೋಣಿಗಳನ್ನು ಖರೀದಿಸಿ ನಿರ್ವಹಣೆ ಮತ್ತು ಚಾಲನೆಗಾಗಿ ಅರಮನೆಕೊಪ್ಪ ಗ್ರಾಮಪಂಚಾಯಿತಿಗೆ ಹಸ್ತಾಂತರಿಸಲಾಗಿದೆ.

ಸಾವೆಹಕ್ಕಲು ಜಲವಾಹಕ ನಾಲೆಯ ಹರಿವಿನಿಂದ ಮಳಲಿ ಗ್ರಾಮದ ಪ್ರೌಢಶಾಲೆಗೆ ಮಕ್ಕಳು ಹೋಗುವಲ್ಲಿ ತೊಂದರೆಯಾಗಿರುವ ಸ್ಥಳದಲ್ಲಿ ಕಾಲು ಸೇತುವೆ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ.

ಅನುಬಂಧ ಅ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
ವರಾಹಿ ಜಲವಿದ್ಯುತ್ ಯೋಜನೆ
ವರಾಹಿ, ಚಕ್ರಾ ಮತ್ತು ಸಾವೆಹಕ್ಲು ಯೋಜನೆಯ ಭೂಸಂತ್ರಸ್ತರಿಗೆ ನಿಗಮದಿಂದ ನೀಡಲಾದ ಉದ್ಯೋಗದ ವಿವರಗಳು

ಕ್ರಮ ಸಂಖ್ಯೆ	ವಿವರಗಳು	ವರಾಹಿ
1	ಒಟ್ಟು ಬಾಧಿತ ಕುಟುಂಬಗಳ ಸಂಖ್ಯೆ	1736
2	ಉದ್ಯೋಗ ನೀಡಿಕೆ ಅ. ಕಾರ್ಪೊರೇಟ್ ಆ. ಕಾರ್ಮಿಕ(ವರ್ಕ್‌ಮನ್)	 19 295
	ಒಟ್ಟು	314
	ಪ್ರತಿ ಶತ	17.69

ವಿ.ಹೆಚ್.ಇ.ಪಿ ಯೋಜನೆಯ ಬಾಧಿತ ಕುಟುಂಬಗಳ ವಿವರಗಳು

ಯೋಜನೆಯ ಭಾಗ	ಸ್ವಾಧೀನ ಪಡಿಸಿಕೊಂಡ ಪಾಸಗಿ ಜಮೀನು(ಎಕರೆಗಳಲ್ಲಿ)	ಬಾಧಿತ ಕುಟುಂಬಗಳು
ಚಕ್ರಾ – ಸಾವೆಹಕ್ಲು	951	261
ವರಾಹಿ	4581	1475
ಒಟ್ಟು	5532	1736

ಡಿಪ್ಲೋಮೋ ಮತ್ತು ಐಟಿಐ ವಿದ್ಯೆ ನೀಡಿರುವುದು

ಡಿಪ್ಲೋಮೋ	54
ಐಟಿಐ	86
ಒಟ್ಟು	140

ಅನುಬಂಧ – ಆ.

ಕರ್ನಾಟಕ ವಿದ್ಯುತ್ ನಿಗಮದಿಂದ ಕೈಗೊಂಡ ಪರ್ಯಾಯ ರಸ್ತೆಗಳ ವಿವರ

ಕ್ರ.ಸಂ.	ರಸ್ತೆಯ ಹೆಸರು	ರಸ್ತೆಯ ಉದ್ದ (ಕಿ.ಮೀ.ಗಳಲ್ಲಿ)
01	ಯಡೂರು–ತೀರ್ಥಹಳ್ಳಿ ಎಂ.ಡಿ.ಆರ್ ರಸ್ತೆಗೆ ಪರ್ಯಾಯ ರಸ್ತೆ, ಹೆಬ್ಬೈಲು–ಕಿಮ್ಮನೆ ರಸ್ತೆ ಕವಲೆದುರ್ಗ ಮಾರ್ಗವಾಗಿ	11.50
02	ನಾಲೂರು–ಶುಂಠಿಹಕ್ಲು ಮುಂದುವರಿದ0ತೆ ಕರಿಬಸರಿ ಮತ್ತು ಬೊಬ್ಬಿ ರಸ್ತೆ, ಇದು ಕಾಗಿನಕೊಡಿಗೆ, ಕೊಕ್ಕೋಡು, ಶಿವಳ್ಳಿ, ಹೆದ್ದಾಗಿಲು, ಶುಂಠಿಹಕ್ಲು ಮುಂತಾದ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುತ್ತದೆ.	10.00
03	ಮೇಕೇರಿ, ಕೊಳವಾಡಿ ಮತ್ತು ಹಿರೇಬೈಲು ರಸ್ತೆ	3.60
04	ಮೇಲಿನಬೈಸೆ–ಮಾಗಲು ರಸ್ತೆ ಚರಂಡಿ ಕಾಮಗಾರಿ ಸೇರಿದ0ತೆ	1.00
05	ಕವರಿಬೈಲು–ಸುಣ್ಣದಮನೆ ಬದಲಿ ರಸ್ತೆ	5.00
06	ರಾಮಪ್ಪ ಗೌಡರ ಮನೆಗೆ ಸ0ಪರ್ಕ ರಸ್ತೆ	0.16
07	ಗಾರ್ಡರಗದ್ದೆಯಿ0ದ ಲಕ್ಷ್ಮೀನರಸಿಂಹ ದೇವಸ್ಥಾನ, ಹುರುಳಿ	0.50
08	ಕಟ್ಟಿನ ಮಡಕೆ ಕೂಡು ಸ್ಥಳದಿಂದ ಕೊಕ್ಕೋಡು ಸೇತುವೆ ವರೆಗೆ	0.82